

ಬಿಸಿಲಲ್ಲೂ ಮೈ ತಣ್ಣಗೆ ಕಂಪಿಸುತ್ತಿತ್ತು. ಆ ತುಟಿಗಳು ಗದಗುಡುತ್ತಿದ್ದವು. ಕೆತ್ತಿಟ್ಟ ಹಾಲುಗಲ್ಲಿನಂಥ ಹುಡುಗಿ. ಎಳೆ ಮಗುವನ್ನು ಸ್ಪರ್ಶಿಸಿದಂತಹ ರೋಮಾಂಚನ ಅದು. ಮಾಧವಿಯ ಪಳಗಿದ ಮನಸ್ಸಿಗೆ, ಪ್ರೀತಿಯ ಜಟಾಪಟಿಯೇನೋ ಅನ್ನಿಸಿತು. ಮೆಟ್ಟಿಲೇರುವಾಗ ದೊಡ್ಡವಾಡ ಸರ್, ‘‘ಆಕೀನರೀ, ಮೊನ್ನಿ ನಾವ್ ಬಸ್‌ಸ್ಟ್ಯಾಂಡ್ ಮುಂದ ಬರೂವಾಗ ಯಾವ್ನೋ ಆಟೊ ಡ್ರೈವರ್ ಜೋಡಿ ಕಿಸಿಯಾಕತ್ತಿದ್ಲಲ್ಲ. ಆಕೀssನ’’– ಅಂತ ಕೊಲಂಬಸ್‌ನಿಗಿಂತ ಹೆಚ್ಚಿನ ಉಮೇದಿಯಲ್ಲಿ ಸ್ಟಾಫ್‌ರೂಂನಲ್ಲಿ ಹೇಳುತ್ತಿದ್ದ ಮಾತು ಬೆನ್ನಿಗಂಟಿತ್ತು. ‘‘ಭಾಗೀರಥಿ ಏಳಮ್ಮಾ, ಮನೆಗೆ ಹೋಗುವಿಯಂತ ಬಾ, ನನ್ನ ಮುಂದ ಏನಾರೂ ಹೇಳ್ಕೋಬೇಕು ಅನ್ನಿಸಿದ್ರ ಹೇಳಪ್ಪಾ...’’ ಅಂದಳು ಮಾಧವಿ. ಅರೆಬರೆಯಾಗಿ ಕಾಲೇಜಿಗೆ ಬಂದ ಬರೀ ಎರಡು ತಿಂಗಳಲ್ಲಿ ಅವಳ ಬದುಕಿನ ಖಾಸಗಿರಂಗವನ್ನು ಕೆದಕಲು ನಾನ್ಯಾರು? ಅವಳಿಗಾದರೂ ನಂಬಿಕೆ ಅನ್ನಿಸುವುದು ಹೇಗೆ? ಭಾಗೀರಥಿ ಮೊಳಕಾಲಿಗೆ ಮುಖ ಹಚ್ಚಿ ಕೂತಿದ್ದಳು. ದಿಗಿಲಿನಿಂದ ಮತ್ತೊಮ್ಮೆ ಅದನ್ನೇ ಇನ್ನೂ ನಯವಾಗಿ ಆಡಿದಳು. ಭಾಗೀರಥಿ ಬಹಳ ನಿಖರವಾಗಿ ಹೇಳಿದ್ದು– ‘‘ನಾ ಮನೀಗ್ ಹೋಗಾಂಗಿಲ್ರಿ.’’ “ಯಾಕ ಅಪ್ಪ– ಅವ್ವ ಏನಾರ ಅಂದ್ರೇನು? ಈಗಿನ ಮಕ್ಳು ಅಟ್ಟಕ್ಕ ಇಟ್ಟಕ್ಕ ಭಾಳ ತಲೀಗ ತಗೋತೀರಿ”. ‘‘ಇಲ್ರಿ, ನಂಗ ಅಪ್ಪ ಇಲ್ರಿ. ಮತ್ತ ಮನ್ಯಾಗ ನಾನು ನಮ್ಮವ್ವ– ಅಣ್ಣ ಮೂರೇ ಮಂದಿ ಇರ್ತೀವ್ರಿ. ಬಾಡಿಗಿ ಮನಿಯಾಗ. ನಮ್ಮವ್ವ ಕಂಪನಿಯಾಗ ಕೂಲಿ ಕೆಲ್ಸಕ್ಕ ಹೊಕ್ಕಾಳ್ರೀ. ಆದ್ರ ಆದ್ರ ಆಕಿ ಸರೀಗಿಲ್ರಿ. ನಮ್ಮಪ್ಪ ಕುಡೀತಿದ್ದನಂತ. ಈಕಿನೇ ಸರಿ ಔಷಧಿ ಮಾಡ್ಸದ ಸಾಯಹೊಡ್ದಾಳಂತ ಮಂದಿ ಅಂತಾರ್ರಿ. ಈಕಿ ಒಬ್ಬರ ಕೂಟ ಅದಾಳ್ರಿ. ಅವ್ರ ಬಾ ಅಂದಾಗೆಲ್ಲ ಈಕಿ ಅಲ್ಲೇರಿ. ನಂಗ ಸಾಕಾಗೇದ್ರಿ...’’ ಬಿಸಿಲು ಇಳಿಯುತ್ತಿತ್ತು. ಮಾಧವಿಗೆ ತನ್ನ ಕಿವಿತಮಟೆಯಿಂದ ಬಿಸಿನೆತ್ತರು ಸೋರಿ ತಟ್ ತಟ್ ಅಂತ ಎದೆಗಿಳಿಯುತ್ತಿದೆ ಎಂಬಂಥ ಅಸಹನೀಯ ಯಾತನೆ. ಭಾಗೀರಥಿ ಸ್ವಯದಲ್ಲಿದ್ದಾಳೆ ಅನ್ನಿಸುತ್ತಿರಲಿಲ್ಲ. ಒಳಗೆ ಅದುಮಿಟ್ಟುಕೊಂಡ ರಕ್ತಗೆಂಪಿನ ದುರ್ಮಾಂಸವೊಂದು ಚರ್ಮ ಸೀಳಿ ಹೊರಗೆ ನೆಗೆವ ಯಾತನೆಯಲ್ಲಿ, ಲೋಕದ ಹಂಗೇನು? ಅವಳ ಕಣ್ಣುಗಳು ಕಣ್ಣೀರಿನ ತೆಳುಕಾಂತಿಯಲ್ಲೇ ಹಾಗೆ ಫಳಫಳಿಸುತ್ತಾವೆಯೇ? ಈ ಮಗು ಇನ್ನೂ ಅತ್ತರೆ, ಕಪ್ಪು ಬರ್ಫದ ತುಂಡಿನಂತಹ ಆ ಕಣ್ಣುಗಳು ಕರಗಿಯೇ ಬಿಡುತ್ತವೆ ಅನ್ನಿಸಿತ್ತು. ಮಾಧವಿ, ಭಾಗೀರಥಿಯನ್ನು ಬಾಚಿ ಅಪ್ಪಿಕೊಂಡಳು. ಇದೇ ಮೊದಲು. ಇಷ್ಟು ದೊಡ್ಡ ಮಕ್ಕಳನ್ನವಳು ಈ ಪರಿ ತಬ್ಬಿದ್ದು. “ನಂಗ ಸಾಯಾಕ ಮನಸ್ಸಿಲ್ಲರಿ. ನಾ ಒಬ್ನ ಪ್ರೀತಿ ಮಾಡ್ತೇನ್ರಿ. ಅಂವಾ ರಿಕ್ಷಾ ಹೊಡೀತಾನ್ರಿ. ಅವ್ರ ಮನ್ಯಾಗೂ ಹೇಳ್ಯಾನ್ರಿ. ಆದ್ರ ಈ ವರ್ಷದ ಮಳಿಯಾಗ ಅವ್ರ ಮನಿ ಪೂರಾ ಬಿದ್ದೇತ್ರಿ. ಅದ್ನ ಕಟ್ಸಕಬೇಕು. ಅವಂಗ ತಂಗಿ ಅದಾಳ್ರೀ. ಆಕಿ ಮದ್ವಿ ಮಾಡಿ ನನ್ನ ಮದ್ವಿ ಮಾಡ್ಕೋತಾನಂತ್ರೀ...” ಭಾಗೀರಥಿಯ ನಂಬಿಕೆ ಬಲು ದೂರದ ನಾಜೂಕು ಎಳೆಯಾಗಿತ್ತು. ಈ ಗಾಳಿ–ಮಳೆ–ಬಿಸಿಲ ಹೊಡತಕ್ಕದು ಎಷ್ಟು ಕಾಲ ತಡೆದೀತೋ? ತಿಳಿಯಲಿಲ್ಲ.